O.S. ನಂಬರಃ 66/2021

ಪಿ. ಡಬ್ಲ್ಯೂಃ 1

ದಿಃ 04-04-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ 21 ರಿಂದ 25 ನೇ ಪ್ರತಿವಾದಿಯರ ಪರ ಶ್ರೀ ವಿ.ಎಸ್.ಎನ್. ವಕೀಲರಿಂದಃ</u>

ದಾವಾ ಸರ್ವೇ ನಂ. 39/3, 133/1,136/1 ಅ ಈ ಆಸ್ತಿಗಳು ನನ್ನ ತಾಯಿ ಕಡೆಯಿಂದ ಬಂದಿರುತ್ತವೆ. ನನ್ನ ಅಜ್ಜನಾದ ಕರಿಯಾ ಕುಸ್ಲು ಗೌಡನಿಗೆ ಸದರಿ ಆಸ್ತಿಗಳು ಯಾವ ಮೂಲದಿಂದ ಬಂದಿವೆ ಎಂದರೆ ಮಾಹಿತಿ ಇಲ್ಲ. ನನ್ನ ತಾಯಿಯ ತವರು ಮನೆಯಲ್ಲಾದ ಪಾಲುವಾಟ್ನಿಯಲ್ಲಿ ನನ್ನ ತಾಯಿಗೆ ಯಾವ ಆಸ್ತಿ ಬಂದಿದೆ ಎಂದರೆ ಸರ್ವೇ ನಂ. 133/1 ಹಾಗೂ 136/1 ಅ ಬಂದಿವೆ ಎಂದು ಹೇಳುತ್ತಾರೆ. ನನ್ನ ತಾಯಿಗೆ ಪಾಲುವಾಟ್ನಿಯಲ್ಲಿ ಆಸ್ತಿ ಹಂಚಿಕೆಯಾಗುವಾಗ ಸರ್ವೇ ನಂ. 136/1 ಅ ಎಷ್ಟು ವಿಸ್ತೀರ್ಣ ಇತ್ತು ಎಂದರೆ ಮಾಹಿತಿ ಇಲ್ಲ. ಆದರೆ ಹಂಚಿಕೆಯಲ್ಲಿ ನನ್ನ ತಾಯಿಗೆ ಬಂದಿದೆ ಎಂದು ಹೇಳುತ್ತಾರೆ. ಪಾಲುವಾಟ್ನಿ ಸಮಯದಲ್ಲಿ ಸರ್ವೇ ನಂ. 136/1 ಅ 12-ಗುಂಟೆ ಕ್ಷೇತ್ರ ಇತ್ತು ಎಂದರೆ ಮಾಹಿತಿ ಇಲ್ಲ.

ಸರ್ವೇ ನಂ. 136/1 ಅ ರ ಪೈಕಿ ಕೊಂಕಣ ರೈಲ್ವೆಗೆ ಸ್ವಾಧೀನಪಡಿಸಿಕೊಂಡ ಕುರಿತಾಗಿ 7-ಗುಂಟೆ ಆಸ್ತಿಗೆ ಪರಿಹಾರ ಕೇಳಿ ಅರ್ಜಿ ಸಲ್ಲಿಸಿದ್ದೆ. ಪರಿಹಾರ ಧನ ಎಷ್ಟು

ಬಂದಿದೆ ಎಂದು ಮಾಹಿತಿ ಇಲ್ಲ, ಆದರೆ ನನ್ನ ತಾಯಿಯ ತಮ್ಮನಾದ ಕುಸ್ಲು ರೂ.250/- ನೀಡಿರುತ್ತಾನೆ. ಕೊಂಕಣ ರೈಲ್ವೆಯವರು ಪರಿಹಾರ ಧನ ಎಷ್ಟು ನೀಡಿರುತ್ತಾರೆಂದು ಮಾಹಿತಿ ಇಲ್ಲ. ಸರ್ವೇ ನಂ. 136/1ಅ ವಾಟ್ನೆಯಲ್ಲಿ ನಮ್ಮ ತಾಯಿಗೆ ಬಂದಂತಹ ಆಸ್ತಿಯಾಗಿತ್ತು ಎಂದರೆ ಸರಿ. ಭೂ ಸ್ವಾಧೀನದ ಹಣದ ಕುರಿತಾಗಿ ದಾವೆಯಲ್ಲಿ ಬರೆಸಿಲ್ಲ.

ಸರ್ವೇ ನಂ. 321/1 ಇದು ವಾಟ್ನೆಗಿಂತ ಮೊದಲು ಎಷ್ಟು ಕ್ಷೇತ್ರ ಇತ್ತು ಎಂದರೆ ಮಾಹಿತಿ ಇಲ್ಲ. ಸರ್ವೇ ನಂ. 321/1, 21 ರಿಂದ 25 ನೇ ಪ್ರತಿವಾದಿಯರ ಕಬ್ಜೆಯಲ್ಲಿರುತ್ತದೆ. ನನ್ನ ತಾಯಿಯ ತಾಯಿ ಅವಧಿಯಲ್ಲಿ ಆದ ಪಾಲುವಾಟ್ನೆ ದಿನದಿಂದಲೂ ಸರ್ವೇ ನಂ. 321/1 ಅದರ ಕಬ್ಜೆ ಪ್ರತಿವಾದಿ ನಂ. 21 ರಿಂದ 25 ರವರ ಬಳಿ ಇದ್ದು, ಭತ್ತ ಬೆಳೆಯುತ್ತಾರೆ ಎಂದರೆ ಸರಿ. 21 ರಿಂದ 25 ನೇ ಪ್ರತಿವಾದಿಯರು ಸದರಿ ಸರ್ವೇ ನಂಬರಿನಲ್ಲಿ ಭತ್ತ ಬೆಳೆಯುವುದನ್ನು ನಾನು ಚಿಕ್ಕವನಿದ್ದಾಗಿನಿಂದಲೂ ನೋಡುತ್ತಿದ್ದೇನೆ. ಸದರಿ ಜಮೀನಿನಲ್ಲಿ ಇತ್ತೀಚೆಗೆ ಬಾವಿ ಮಾಡಿರುತ್ತಾರೆ. ಸರ್ವೇ ನಂ. 321/1 ರಲ್ಲಿ ಕುಸ್ಲು ಕರಿಯಾ ಗೌಡ ಸಹ ಭತ್ತ ಬೆಳೆಯುತ್ತಿದ್ದನ್ನು ನೋಡಿದ್ದೇನೆ. ಈಗ ನೋಡುತ್ತಿರುವ ಭಾವಚಿತ್ರದಲ್ಲಿರುವ ಶೆಡ್ಡನ್ನು ಖರೀದಿದಾರ ಕಟ್ಟಿಸಿರಬಹುದು, ಮಾಹಿತಿ ಇಲ್ಲ. ಸದರಿ ಭಾವಚಿತ್ರದಲ್ಲಿರುವ ಶೆಡ್ಡು ಕುಸ್ಲುನ ಮಗ ಮಾರಾಟ ಮಾಡಿದ ಆಸ್ತಿಯಲ್ಲಿರುತ್ತದೆ. ಸದರಿ ದಾಖಲೆಯನ್ನು ನ್ಯಾಯಾಲಯದ ಗುರುತಿಗಾಗಿ ನಿಸಿ-1 ಎಂದು ಗುರುತಿಸಲಾಯಿತು. ಸರ್ವೇ ನಂ. 321/1 ಕ್ಕೆ ಸಂಬಂಧಿಸಿದ ತೆರಿಗೆಯನ್ನು 24 ನೇ ಪ್ರತಿವಾದಿ ಕುಟುಂಬ ಭರಿಸುತ್ತಿದೆ ಎಂದರೆ ಸರಿ.

ದಾವಾ ಸರ್ವೇ ನಂ. 168 ಸಹ 24 ನೇ ಪ್ರತಿವಾದಿ ಕುಟುಂಬದ ಹಿಡಿತದಲ್ಲಿದ್ದು, ಭತ್ತ ಬೆಳೆಯುತ್ತಾರೆ. ದಾವಾ ಸರ್ವೇ ನಂ. 168 ಪಾಲುವಾಟ್ನಿಯಲ್ಲಿ ಮಂಕಾಳು ಕರಿಯಾ ಗೌಡ ರವರ ಹಿಸ್ಸೆಗೆ ಹಂಚಿಕೆಯಾಗಿರುತ್ತದೆ ಎಂದರೆ ಸರಿ. ಸರ್ವೇ ನಂ. 133/1 ಹಾಗೂ 136/1 ಅ ಆಸ್ತಿಗಳು ನನ್ನ ತಾಯಿಗೆ ಅವರ ತಂದೆ ಕುಟುಂಬದಿಂದ ಬಂದಿದೆ. ನನ್ನ ತಾಯಿ ಕುಟುಂಬದವರು ವಾಟ್ನಿಯಾದ ನಂತರ ಅವರವರ ಆಸ್ತಿಯನ್ನು ಅವರು ವಹಿವಾಟು ಮಾಡಿಕೊಂಡಿರುತ್ತಾರೆಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಹಿಸ್ಸೆಗೆ ಬಂದ ಆಸ್ತಿ ಕುರಿತಾಗಿ ಕೊಂಕಣ ರೈಲ್ವೆಯಿಂದ ಪರಿಹಾರ ಪಡೆದುಕೊಂಡಿದ್ದರೂ ಸಹ ಅದನ್ನೆಲ್ಲಾ ಮರೆಮಾಚಿ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.